# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ಹಂಪಿನಗರ ವಾರ್ಡ್ ಸಂಖ್ಯೆ–133,
ಸಂಕಷ್ಟಹರ ಗಣಪತಿ ದೇವಸ್ಥಾನ ಪಾರ್ಕ್ ಹತ್ತಿರ, ಆರ್.ಪಿ.ಸಿ. ಲೇಔಟ್, ಬೆಂಗಳೂರು–560 040

ದಿನಾಂಕ:–03–09–2022

ಸಂಖ್ಯೆ: ಸ.ಕಾ.ನಿ.ಅ/ಗಾಳಿ/ಪಿಆರ್/ /22–23

ವಾರ್ಡ್ ಸಂಖ್ಯೆ : 133 ವಾರ್ಡ್ ಸಭೆಯ ನಡವಳಿ

**ಸಭೆಗೆ ಹಾಜರಾಗಿ ಭಾಗವಹಿಸಿದ ಸದಸ್ಯರು ಮತ್ತು ಸಾರ್ವಜನಿಕರ ವಿವರ:**

| ಕ್ರಮ ಸಂಖ್ಯೆ | ಅಧಿಕಾರಿಗಳು ಮತ್ತು ಸದಸ್ಯರುಗಳ ಹೆಸರು | ಪದನಾಮ/ಅಧ್ಯಕ್ಷರು | ಹಾಜರಾತಿ |
|---|---|---|---|
| 1 | ಶ್ರೀಮತಿ. ಮಾಧುರಿ | ನೋಡೆಲ್ ಅಧಿಕಾರಿ | ಹಾಜರಾಗಿರುತ್ತಾರೆ |
| 2 | ಶ್ರೀ. ರಘುನಾಥ್ .ಕೆ.ಎನ್. | ಕಾರ್ಯದರ್ಶಿ | ಹಾಜರಾಗಿರುತ್ತಾರೆ |
| 3 | ಶ್ರೀ. ಸಂದೀಪ್ | ಕಿ.ಅ (ಗುತ್ತಿಗೆ ಆದಾರದ ಮೇಲೆ) | ಹಾಜರಾಗಿರುತ್ತಾರೆ |
| 4 | ಶ್ರೀಮತಿ. ಹೇಮಲತಾ | ಬಿ.ಡಬ್ಲ್ಯೂ.ಎಸ್.ಎಸ್.ಬಿ. | ಹಾಜರಾಗಿರುತ್ತಾರೆ |
| 5 | ಡಾ॥ ಆದರ್ಶ್ | ಬಿಬಿಎಂಪಿ | ಹಾಜರಾಗಿರುತ್ತಾರೆ |
| 6 | ಶ್ರೀ.ಲಕ್ಷ್ಮೀನರಸಿಂಹಯ್ಯ | ತೋಟಗಾರಿಕೆ | ಹಾಜರಾಗಿರುತ್ತಾರೆ |
| 7 | ಶ್ರೀಮತಿ.ಕವಿತಾ | ಆರೋಗ್ಯ ಅಧಿಕಾರಿ | ಹಾಜರಾಗಿರುತ್ತಾರೆ |
| 8 | ಶ್ರೀ. ರಾಜಶೇಖರ್ | ಹಿ.ಆರೋಗ್ಯ ಅಧಿಕಾರಿ | ಹಾಜರಾಗಿರುತ್ತಾರೆ |

**ಸಭೆಗೆ ಹಾಜರಿದ್ದ ಸಾರ್ವಜನಿಕರು**

1. ಶ್ರೀ. ಜಯರಾಮ್
2. ಶ್ರೀ. ಕೆಂಪಯ್ಯ
3. ಶ್ರೀ. ವೇಣು ಗೋಪಾಲ್
4. ಶ್ರೀ. ಲಕ್ಷ್ಮೀ ನಾರಾಯಣ್
5. ಶ್ರೀ. ರಾಜು
6. ಶ್ರೀ. ಮುತ್ತಪ್ಪ ಶ್ರೀನಿವಾಸ್
7. ಶ್ರೀ. ರಮೇಶ್

ದಿನಾಂಕ:-03-09-2022 ರಂದು ಮಾನ್ಯ ನೋಡಲ್ ಅಧಿಕಾರಿಗಳು ವಾರ್ಡ್ ಸಂಖ್ಯೆ : 133 ಹಂಪಿನಗರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ. ಶ್ರೀ. ರಘುನಾಥ್ .ಕೆ.ಎನ್. ಕಾರ್ಯದರ್ಶಿ ರವರು ಹಾಜರಿದ್ದ ಎಲ್ಲಾ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಮತ್ತು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರುತ್ತಾ ಸಭೆಯನ್ನು ಪ್ರಾರಂಭಿಸಲಾಯಿತು.

ಈ ಹಿಂದಿನ ಸಭೆಯಲ್ಲಿ ಬಂದಿದ್ದ ದೂರುಗಳ ಮೇಲೆ ಕೈಗೊಂಡಿರುವ ಕ್ರಮಗಳ ಬಗ್ಗೆ ಚರ್ಚಿಸುತ್ತ ಪ್ರಸ್ತುತ ಕುಂದು ಕೊರತೆಗಳ ಬಗ್ಗೆ ಚರ್ಚೆ ಪ್ರಾರಂಭಿಸಲಾಯಿತು.

| ಕ್ರ.ಸಂ | ವಿಷಯ | ತೀರ್ಮಾನ |
|---|---|---|
| 1 | ಪೊಲೀಸ್ ಇಲಾಖೆಯವರು ಮತ್ತು ಅರಣ್ಯಾಧಿಕಾರಿಗಳು ವಾರ್ಡ್ ಸಮಿತಿ ಸಭೆಗೆ ಗೈರು ಹಾಜರಾಗುತ್ತಿರುವುದಾಗಿ ಶ್ರೀ.ಕೃಷ್ಣ ರವರು ತಿಳಿಸಿದರು. | ಕ್ರಮ : ಈ ವಿಚಾರವಾಗಿ ಕೂಡಲೇ ಕ್ರಮವನ್ನು ಕೈಗೊಳ್ಳುವುದಾಗಿ ನೋಡೆಲ್ ಅಧಿಕಾರಿರವರು ತಿಳಿಸಿದರು. |
| 2 | ಪೋಸ್ಟ್ ಆಫೀಸ್ ಹತ್ತಿರ ರಸ್ತೆಯಲ್ಲಿ ಗುಂಡಿಗಳನ್ನು ಮುಚ್ಚಿರುವುದಿಲ್ಲ ಮತ್ತು ಸ್ಟ್ರೀಟ್ ಲೈಟ್‌ನ್ನು ಹಾಕಿರುವುದಿಲ್ಲ ಹಾಗೂ ರಸ್ತೆಯಲ್ಲಿ ಬಿದ್ದಿರುವ ಮರಗಳ ಸರ್ವೆಯನ್ನು ಮಾಡಿರುವುದಿಲ್ಲವೆಂದು ಶ್ರೀ.ಕೃಷ್ಣ ರವರು ತಿಳಿಸಿದರು. | ಕ್ರಮ : ಈ ವಿಚಾರವಾಗಿ ಕೂಡಲೇ ಕ್ರಮವನ್ನು ಕೈಗೊಳ್ಳುವುದಾಗಿ ನೋಡೆಲ್ ಅಧಿಕಾರಿರವರು ತಿಳಿಸಿದರು. |
| 3 | ವಾರ್ಡ್ ವ್ಯಾಪ್ತಿಯ ರಸ್ತೆಗಳಲ್ಲಿ ಗುಂಡಿಗಳನ್ನು ಮುಚ್ಚಬೇಕೆಂದು ಶ್ರೀ.ವೇಣುಗೋಪಾಲ್ ರವರು ತಿಳಿಸಿದರು. | ಕ್ರಮ : ಈ ವಿಚಾರವಾಗಿ ಕೂಡಲೇ ಕ್ರಮವನ್ನು ಕೈಗೊಳ್ಳಬೇಕೆಂದು ಸಹಾಯಕ ಅಭಿಯಂತರವರಿಗೆ ನೋಡೆಲ್ ಅಧಿಕಾರಿರವರು ತಿಳಿಸಿದರು. |
| 4 | ವಾರ್ಡ್ ವ್ಯಾಪ್ತಿಯ ಉದ್ಯಾನವನದಲ್ಲಿ ಸೊಳ್ಳೆ ಔಷಧಿಗಳನ್ನು ಸಿಂಪಡಿಸಬೇಕೆಂದು ಮತ್ತು 5ನೇ ಮುಖ್ಯರಸ್ತೆಯಲ್ಲಿ ಮಣ್ಣನ್ನು ತೆಗೆಯಬೇಕೆಂದು ಶ್ರೀ.ಜಯರಾಮ್ ರವರು ತಿಳಿಸಿದರು. | ಕ್ರಮ : ಈ ವಿಚಾರವಾಗಿ ಕೂಡಲೇ ಕ್ರಮವನ್ನು ಕೈಗೊಳ್ಳುವುದಾಗಿ ನೋಡೆಲ್ ಅಧಿಕಾರಿರವರು ತಿಳಿಸಿದರು. |
| 5 | ಮಾರುತಿ ನಗರದಲ್ಲಿ ಮಳೆ ನೀರು ಮನೆಗಳಿಗೆ ನುಗ್ಗುತ್ತಿರುವುದಾಗಿ ಶ್ರೀ.ಮುತ್ತತ್ತಿ ಶ್ರೀನಿವಾಸ್ ರವರು ತಿಳಿಸಿದರು | ಕ್ರಮ : ಈ ವಿಚಾರವಾಗಿ ಕೂಡಲೇ ಕ್ರಮವನ್ನು ಕೈಗೊಳ್ಳಬೇಕೆಂದು ಸಹಾಯಕ ಅಭಿಯಂತರವರಿಗೆ ನೋಡೆಲ್ ಅಧಿಕಾರಿರವರು ತಿಳಿಸಿದರು. |
| 6 | ಅಂಡರ್ ಪಾಸ್‌ನಲ್ಲಿ ಕಸವನ್ನು ತೆಗೆದಿಲ್ಲವೆಂದು, ಡಿಸಿಲ್ಟಿಂಗ್ ಮಾಡಿಲ್ಲವೆಂದು, ಕವಿಕಾ ಬಡಾವಣೆಯಲ್ಲಿ ಒಳಚರಂಡಿ ಸಮಸ್ಯೆ ಇದ್ದು, ರಸ್ತೆಗಳಲ್ಲಿ ಗುಂಡಿಗಳನ್ನು ಮುಚ್ಚಬೇಕೆಂದು ಮತ್ತು ಅಂಡರ್ ಪಾಸಿನಲ್ಲಿ ವಾಹನಗಳನ್ನು ತೆರವುಗೊಳಿಸಬೇಕೆಂದು, ಸ್ಲ್ಯಾಬ್‌ಗಳನ್ನು ಹಾಕ ಬೇಕೆಂದು ಶ್ರೀ.ಲಕ್ಷ್ಮೀನಾರಾಯಣ್ ರವರು ತಿಳಿಸಿದರು | ಕ್ರಮ : ಈ ವಿಚಾರವಾಗಿ ಕೂಡಲೇ ಕ್ರಮವನ್ನು ಕೈಗೊಳ್ಳಬೇಕೆಂದು ಸಹಾಯಕ ಅಭಿಯಂತರವರಿಗೆ ನೋಡೆಲ್ ಅಧಿಕಾರಿರವರು ತಿಳಿಸಿದರು. |
| 7 | ವಾರ್ಡ್ ವ್ಯಾಪ್ತಿಯಲ್ಲಿ ಉದ್ಯಾನವನ್ನು ಸರಿಯಾಗಿ ನಿರ್ವಹಣೆ ಮಾಡುತ್ತಿಲ್ಲವೆಂದು ಮತ್ತು ವಾರ್ಡ್ ಕಛೇರಿಯ ಆವರಣದಲ್ಲಿ ಫುಡ್ ಸ್ಟಾಲ್‌ಗಳನ್ನು ಹಾಕಿಸಬಾರದೆಂದು ಶ್ರೀ.ರಾಜು ರವರು ತಿಳಿಸಿದರು. | ಕ್ರಮ : ಈ ವಿಚಾರವಾಗಿ ಕೂಡಲೇ ಕ್ರಮವನ್ನು ಕೈಗೊಳ್ಳುವುದಾಗಿ ನೋಡೆಲ್ ಅಧಿಕಾರಿರವರು ತಿಳಿಸಿದರು. |

ಸಭೆಯನ್ನು ಕಾರ್ಯದರ್ಶಿಗಳಾದ ಶ್ರೀ. ರಘುನಾಥ್ .ಕೆ.ಎನ್. ರವರು ವಂದನಾರ್ಪಣೆಯೊಂದಿಗೆ ಮುಕ್ತಾಯ ಮಾಡಿದರು.

ಕಾರ್ಯದರ್ಶಿ
ವಾರ್ಡ್ ಸಂಖ್ಯೆ : 133 (ಹಂಪಿನಗರ)

**ಪ್ರತಿಯನ್ನು:-**

1. ಮಾನ್ಯ ಆಯುಕ್ತರ ಆಪ್ತ ಸಹಾಯಕರಿಗೆ ಕಳುಹಿಸುತ್ತಾ ಮಾನ್ಯ ಆಯುಕ್ತರ ಗಮನಕ್ಕೆ ತರುವಂತೆ ಕೋರಿದೆ.
2. ವಿಶೇಷ ಆಯುಕ್ತರು ಆಡಳಿತ ರವರ ಅವಗಾಹನೆಗೆ ಸಲ್ಲಿಸಿದೆ.
3. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
4. ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಗಳು ರವರ ಅವಗಾಹನೆಗೆ ಸಲ್ಲಿಸಿದೆ.